ಕಾದಿದ್ದನ್ನು ಹೇಳದೆಯೇ ನನ್ನ ಎಡಬಿಡಂಗಿತನವನ್ನು ದಶಮಾನದ ಅತಿ ದೊಡ್ಡ ಅಪರಾಧವೆಂಬಂತೆ ಬಿಂಬಿಸಿ, ಅದನ್ನು ಕೇಳಿದ ಎಂಥವರಿಗೂ ಎದೆಯಲ್ಲಿ ನಡುಕ ಹುಟ್ಟುವಂತೆ ಮಾಡಿ ವಿವರಿಸಿದ ಚಿಕ್ಕಯ್ಯ.

ಆಯಿ ಅದಾಗಲೇ ಸಾಂಬಾರು ಬಟ್ಟಲಿನಲ್ಲಿದ್ದ ಮೆಣಸು, ಸಾಸಿವೆ, ಉಪ್ಪನ್ನು ತಂದಿಟ್ಟುಕೊಂಡಿದ್ದವಳು ನನ್ನನ್ನು ಕಂಡವಳೇ ದೃಷ್ಟಿ ಬಳಿದು ಹೊಡಸಲಿನ ಬೆಂಕಿಗೆ ಹಾಕಿ ಫಾಟೆಬ್ಬಿಸಿದಳು. ಬಿಟ್ಟರೆ ಹೆಚ್ಚೇನೂ ಮಾತನಾಡಲಿಲ್ಲ. ಕೂಡು ಕುಟುಂಬದಲ್ಲಿ ಮನಸ್ಸು ಬಿಚ್ಚಿ ಮಾತನಾಡಬೇಕೆಂದರೆ ಅದಕ್ಕೂ ಹೊತ್ತುಗೊತ್ತಿನ ಮುಹೂರ್ತ ಹುಡಕಬೇಕು. ಬೆಳಗ್ಗಿನ ಆಸರಿ ಹಬ್ಬಣ ಮುಗಿದ ಮೇಲೋ, ಮಧ್ಯಾಹ್ನದ ಊಟದ ಚಾಕರಿ ಪೂರೈಸಿ ಎಲ್ಲರೂ ಮಲಗಿದ್ದಾರೆ ಎಂದು ಗೊರಕೆಯ ಸಪ್ಪಳ ಹೊರಹೊಮ್ಮಿದ ಮೇಲೋ ಅಥವಾ ರಾತ್ರಿಯವರೆಗೂ ಕಾಯುವ ತಾಳ್ಮೆಯಿದೆ ಎಂದಾದರೆ ಮಲಗಲು ಕೋಣೆ ಹೊಕ್ಕಮೇಲೋ ಮಾತನಾಡಬೇಕು. ಇಲ್ಲದಿದ್ದರೆ ಒಂದಕ್ಕೆರಡಾಗಿ ಮನೆಮಂದಿಯೇ ಸಾಕು ಊರು ತುಂಬಾ ಸುದ್ದಿ ಹಬ್ಬಿಸಲು. ಅದಕ್ಕಾಗಿ ನಾನೂ ಮೈಮೇಲೆ ಬಿದ್ದು 'ಅರ್ಜೆಂಟು ಹೊರಟು ಬಾ, ಮಾತನಾಡುವುದಿದೆ' ಅಂತ ಕರೆಸಿದ್ದೇಕೆ ಎಂದು ಆಯಿಯನ್ನು ತಕ್ಷಣಕ್ಕೆ ಕೇಳಲಿಕ್ಕೆ ಹೋಗಲಿಲ್ಲ.

'ವಾರಗಟ್ಟಲೆಯಾಯ್ತು ಮಳೆ ಬರದೆ. ಇಲ್ಲದಿದ್ದರೆ ಕೊಚ್ರಾಟೆ ರಸ್ತೆಯಲ್ಲಿ ನಡೆದು ಬರುವುದೂ ಒಂದು ಫಜೀತಿಯೇ ಸೈ. ಪಂಚಾಂಗ ನೋಡಿದ್ರೆ ಈ ಸಲ ಆರಿದ್ರ ಮಳೆಯೂ ಕಡಿಮೆ, ಮೃಗಶಿರ ಮಳೆಯೂ ಕಡಿಮೆಯೇ...' ಎಂದು ಹೆರ್ಪ ಅನವಶ್ಯಕವಾಗಿ ಹವಾಮಾನ ವರದಿಯನ್ನು ಒಪ್ಪಿಸಿದ. ಮಾತು ನಿಂತ ಅಪ್ಪಯ್ಯ ತನ್ನಣ್ಣನ ಮಾತಿಗೆ ಹೌದೆಂಬುವವರಂತೆ ಮುಖ ಮಾಡಿ ಕುಳಿತ.

ಬಾಳೆ ಹಾಕಿ ಕಾಯುತ್ತಿದ್ದ ಚಿಕ್ಕಮ್ಮ ಊಟಕ್ಕೆ ವರಾತ ಮಾಡಿದಳು. ಮಧ್ಯಾಹ್ನದ ಊಟದ ಚಾಕ್ರಿ ಆಯಿಯದ್ದಾದರೆ ಚಿಕ್ಕಮ್ಮನದು ರಾತ್ರಿಯ ಪಾಳಿ.

ಮನೆಯ ವಾತಾವರಣಕ್ಕೆ ಹೊಂದಿಕೊಳ್ಳಲು ಹರಸಾಹಸ ಪಡುತ್ತಾ ಪಂಕ್ತಿಯಲ್ಲಿ ಊಟಕ್ಕೆ ಕುಳಿತಿದ್ದೆ. ಮೊಡಕ ಮುತ್ತಿದ್ದ ಬೂಂದಿ ಬಡಿಸಲು ಆಯಿ ತಂದಿದ್ದೇ ತಡ ಅನ್ನವನ್ನು ಚೆನ್ನಾಗಿ ಗಿಮಚಿ ಕಳಲೆ ಮಾಡಿ ಉಣ್ಣುತ್ತಿದ್ದ ಹೆರ್ಪ, 'ನಮ್ಮ ಕಂಪ್ಲಿ ವಿನೋದನಿದ್ದಾನಲ್ಲ ಅವನ ಮಗುವಿನ ನಾಮಕರಣವಿತ್ತು. ಎಷ್ಟು ಬೇಡಾ ಹೇಳಿದರೂ ಕೇಳದೆ ಮಕ್ಕಳ ಕಾಯಿ ಅಂತ ಹತ್ತು ಲಾಡು ಹಾಕಿ ಕಳಿಸಿದ್ದಾನೆ. ಮಗುವಂತೂ ಪಕ್ಕಾ ಅಪ್ಪನ ಹಾಗೆಯೇ ಗುಳಿಕೆನ್ನೆ, ಬಟ್ಟಲು ಕಣ್ಣು, ಬಣ್ಣವಂತೂ ಪಕ್ಕಾ ಬಂಗಾರ' ಅಂತ ಹೊಗಳಿದ್ದು ಬಡಿಸುತ್ತಿದ್ದ ಆಯಿಗೆ ಸುತಾರಾಂ ಹಿಡಿಸಲಿಲ್ಲ ಎಂದು ಅವಳು ಪಾತ್ರೆ ಜರೆದಿದ್ದರ ಸಪ್ಪಳದಲ್ಲಿಯೇ ತಿಳಿಯಿತು.

ಪಾಪದ ಆಯಿ, ಒತ್ತಾಯದಿಂದ ಕಣಕದಲ್ಲಿ ತುಂಬಿದ ಹೋಳಿಗೆಯ ಹೂರಣ ಇಣುಕುವಂತೆ ಆಯಿಯ ಎಲುಬಿನ ಹಂದರ ಚರ್ಮದಿಂದಾಚೆ ಎದ್ದು ಕಾಣಿಸುತ್ತಿತ್ತು. ಮನೆ ಮಠ ಅಂತ ಗಂಧದ ಕೊರಡಿನಂತೆ ಬದುಕನ್ನು ತೇಯುತ್ತಿದ್ದವಳಿಗೆ ನೆಮ್ಮದಿಯನ್ನೂ ಕೊಡಲಾಗದೆ ಸೋತಿದ್ದ ನನಗೂ ವಿನೋದನ ಮಾತು ಬರುತ್ತಿದ್ದಂತೆಯೇ ಇರಿಸುಮುರುಸಾಯಿತು. ನನ್ನನ್ನೂ ಸೇರಿಸಿಕೊಂಡು ನಮ್ಮ ಮನೆಯವರೆಲ್ಲರ ನೆಮ್ಮದಿ ಕೆಡಿಸುವ ವಿನೋದ ಕೆಳಗಿನ ಕಂಪ್ಲಿಯವ. ಯಾವುದೋ ಕಾಲದಲ್ಲಿ ನಮ್ಮನೆಯ ಮುದಿ ಅಜ್ಜನ ಒಂದು ಬಳ್ಳಿ ಕಂಪ್ಲಿಯ ಮೂಲೆಗೆಲ್ಲೋ ಹೋಗಿ ಅಡವಿಯ ಮಧ್ಯದಲ್ಲೆಲ್ಲೋ ಪಡಾವು ಜಮೀನಿನಲ್ಲಿ ಹಿಡುವಳಿ ಮಾಡಿಕೊಂಡು ಅಲ್ಲೇ ನೆಲೆನಿಂತಿತ್ತು... ನೆಲ ಫಲವತ್ತಿದೆಯೆಂದು ಮತ್ತು ತೋಟ ಗದ್ದೆ ಮಾಡಲು ಅಲ್ಲಲ್ಲಿರುವ ಕೊಡ್ಲಿನ ಉದ್ದ ಅಗಲದ ಕೋವು ಚೆನ್ನಾಗಿದೆಯೆಂದು ಕಾಡನ್ನು ಅತಿಕ್ರಮಣ ಮಾಡಿಕೊಂಡು ಒಳ್ಳೆ ತೋಟ ಮನೆ ಮಾಡಿಕೊಂಡಿದ್ದೇ ಮಾಡಿಕೊಂಡಿದ್ದು, ಈಗ ಕಂಪ್ಲಿಯಲ್ಲಿ ಅತಿಕ್ರಮಣ ಮಾಡಿಕೊಂಡ ಜಾಗದಲ್ಲಿ ಏನಿಲ್ಲವೆಂದರೂ ಏಳೆಂಟು ಮನೆಗಳಾಗಿವೆ; ಎಕರೆಗಟ್ಟಲೆ ಅಡಿಕೆ ತೋಟ ಹಬ್ಬಿದ ಜಮೀನಿದೆ. ಅದೇ